<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.94/2015</u>

ದಿಃ 05.02.2021

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-6

| | | |
|---|---|---|
| ಹೆಸರು | ಃ | ದೇವರಾಜ್ ಟಿ ಎಂ |
| ತಂದೆಯ ಹೆಸರು | ಃ | ಮಾಗಡಿ ರಂಗಯ್ಯ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಆಟೋ ಚಾಲಕ |
| ವಾಸಸ್ಥಳ | ಃ | ತಿರುಮಲೆ, ಮಾಗಡಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ.1 ನನಗೆ ಗೊತ್ತು. ಈಗ್ಗೆ 4 ವರ್ಷಗಳ ಹಿಂದೆ ಪೊಲೀಸರು ನನ್ನ ಸಹಿಯನ್ನು ಮಾಗಡಿ-ಕುಣಿಗಲ್ ರಸ್ತೆ ಹೊಂಬಾಳಮ್ಮನಪೇಟೆಯಲ್ಲಿ ಪಡೆದಿದ್ದರು. ಪೊಲೀಸರು ಮಧ್ಯಾಹ್ನ ಬಂದಿದ್ದರು. ಚಾಸಾ.1ರವರನ್ನು ಆ ಸ್ಥಳದಿಂದ ಆರೋಪಿಗಳು ಕರೆದುಕೊಂಡು ಹೋಗಿರುತ್ತಾರೆ ಎಂಬ ಕಾರಣಕ್ಕೆ ಸಹಿ ಪಡೆದಿರುತ್ತಾರೆ. ಅಲ್ಲಿ ಪೊಲೀಸರು ಮಹಜರ್ ಮಾಡಿರುತ್ತಾರೆ. ಸಾಕ್ಷಿದಾರರು ನಿ.ಪಿ.7 ಮಹಜರ್‌ನಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ನಮ್ಮೊಂದಿಗೆ ಬೇರೆ ಯಾರೂ ಇರಲಿಲ್ಲ.

<u>ಪಾಟೀ ಸವಾಲುಃ ಶ್ರೀ. ಎ.ಬಿ.ಡಿ., ವಕೀಲರಿಂದ 2, 3, 5, 8 ಮತ್ತು 9ನೇ ಆರೋಪಿಗಳ ಪರವಾಗಿಃ</u>

ನಿ.ಪಿ.7ನ್ನು ಸಹಿ ಮಾಡುವ ಮುನ್ನ ನನಗೆ ಪೊಲೀಸರು ಓದಿ ಹೇಳಿರುತ್ತಾರೆ. ನನಗೆ ಸ್ಥಳದ ಚಕ್ಕುಬಂದಿ ಗೊತ್ತು. ನಿ.ಪಿ.7ನ್ನು ಬರೆದ ನಿಖರವಾದ ಸಮಯ ನನಗೆ ಹೇಳಲು ಬರುವುದಿಲ್ಲ. ಯಾವ ಪೊಲೀಸರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳವನ್ನು ಪೊಲೀಸರೇ ತೋರಿಸಿದ್ದು, ನಾನು ಹೀಗೇ ಆಗಿರುತ್ತದೆ ಎಂದು ಹೇಳಿದೆ. ಚಾಸಾ.1 ನನಗೆ ಸಂಬಂಧದಲ್ಲಿ ಅಣ್ಣ ಆಗಬೇಕು. ಚಾಸಾ.1ರವರ ಹೆಂಡತಿ 4ನೇ ಆರೋಪಿ ಎಂದರೆ ಸರಿ. 1ನೇ ಆರೋಪಿ ಚಾಸಾ.1ರವರ ಹೆಂಡತಿಯ ತಮ್ಮ. ಚಾಸಾ.1ರವರ ಇನ್ನೊಬ್ಬ ಹೆಂಡತಿಯ ಹೆಸರು ಗಾಯಿತ್ರಿ. ನಾನು ಚಾಸಾ.1ರವರ ಸಂಬಂಧಿ ಎಂಬ ಕಾರಣಕ್ಕೆ ಅವರಿಗೆ ಸಹಾಯ ಮಾಡುವ ಉದ್ದೇಶಕ್ಕೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿ.ಪಿ.7ರಲ್ಲಿರುವ ವಿಷಯಗಳು ನನಗೆ ಸರಿಯಾಗಿ ಗೊತ್ತಿಲ್ಲ ಎಂದರೆ ಸರಿ. ನಿ.ಪಿ.7ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಟಿ.ಜಿ., ಬಿ.ಹೆಚ್.ಹೆಚ್., ಮತ್ತು ಕೆ.ಸಿ.ಎಂ., ವಕೀಲರಿಂದಃ 6, 7, 10 ಮತ್ತು 11ನೇ ಆರೋಪಿಗಳ ಪರವಾಗಿಃ ಶ್ರೀ. ಎ.ಬಿ.ಡಿ., ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅನುಮತಿಸಲಾಯಿತು.</u>

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.